# ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ. ಮಧು. ಜಿ. ಮಾದೇಗೌಡ (ಪದವೀಧರರ ಕ್ಷೇತ್ರ)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 733 (806)

ಉತ್ತರಿಸುವ ದಿನಾಂಕ : 12.12.2023

ಉತ್ತರಿಸುವವರು : ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ. | ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಮಂಡ್ಯ ನಗರದಲ್ಲಿ ಗೃಹ ಬಳಕೆ ಮತ್ತು ಗೃಹೇತರ ಬಳಕೆಗಾಗಿ ಕಲ್ಪಿಸಲಾಗಿರುವ ನೀರು ಸಂಪರ್ಕಗಳ ಸಂಖ್ಯೆ ಎಷ್ಟು: (ವಿವರ ನೀಡುವುದು). | ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಮಂಡ್ಯ ನಗರದ ನೀರು ಸರಬರಾಜು ವ್ಯವಸ್ಥೆಯನ್ನು ನಿರ್ವಹಿಸಲಾಗುತ್ತಿದ್ದು, ಒಟ್ಟು ನೀರಿನ ಸಂಪರ್ಕಗಳ ವಿವರ ಕೆಳಕಂಡಂತಿರುತ್ತದೆ.<br>ಗೃಹ ಬಳಕೆ ಸಂಪರ್ಕ: 19724<br>ಗೃಹೇತರ ಬಳಕೆ ಸಂಪರ್ಕ: 177 |
| ಆ. | ಗೃಹ ಬಳಕೆ ಮತ್ತು ಗೃಹೇತರ ಬಳಕೆಗಾಗಿ ಪೂರೈಸುತ್ತಿರುವ ಪ್ರತಿಯೊಂದು ನೀರಿನ ಸಂಪರ್ಕಕ್ಕೆ ವಿಧಿಸುತ್ತಿರುವ ಮಾಸಿಕ ತೆರಿಗೆ ಅಥವಾ ಶುಲ್ಕದ ಮೊತ್ತ ಎಷ್ಟು: | ಪ್ರತಿ ನೀರಿನ ಸಂಪರ್ಕಕ್ಕೆ ವಿಧಿಸುತ್ತಿರುವ ಮಾಸಿಕ ಶುಲ್ಕ ಕೆಳಕಂಡಂತಿರುತ್ತದೆ.<br>ಗೃಹ ಬಳಕೆ ರೂ. 282/-<br>ಗೃಹೇತರ ಬಳಕೆ ರೂ. 564/- |
| ಇ. | ಗೃಹ ಬಳಕೆ ನೀರಿಗೆ ವಿಧಿಸುತ್ತಿರುವ ತೆರಿಗೆ ಅಥವಾ ಶುಲ್ಕದ ಮಾಸಿಕ ಮೊತ್ತವನ್ನು ರೂ.220.00ಕ್ಕೆ ಇಳಿಸುವ ಪ್ರಸ್ತಾವನೆ ಸರ್ಕಾರ ಮುಂದಿದೆಯೇ: ಹಾಗಿದ್ದಲ್ಲಿ, ಯಾವ ತಿಂಗಳಿನಿಂದ ಅನ್ವಯವಾಗುವಂತೆ ಇದು ಜಾರಿಗೆ ಬರಲಿದೆ: (ಸಂಪೂರ್ಣ ವಿವರ ನೀಡುವುದು). | ನೀರಿನ ಮಾಸಿಕ ದರಗಳನ್ನು ಗೃಹ ಬಳಕೆಗೆ ರೂ. 220/-, ಗೃಹೇತರ ಬಳಕೆಗೆ ರೂ. 440/- ಮತ್ತು ವಾಣಿಜ್ಯ/ಕೈಗಾರಿಕೆ ಬಳಕೆಗೆ ರೂ. 880/- ಪರಿಷ್ಕರಿಸಲು ಜಿಲ್ಲಾಧಿಕಾರಿ, ಮಂಡ್ಯ ಜಿಲ್ಲೆ, ಮಂಡ್ಯರವರು ದಿನಾಂಕ:29.05.2023ರಂದು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು ಸದರಿ ಪ್ರಸ್ತಾವನೆಯನ್ನು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರು ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಸಲ್ಲಿಸಿದ್ದಲ್ಲಿ ದರವನ್ನು ಪರಿಷ್ಕರಿಸಲು ಅನುಮೋದನೆ ನೀಡುವ ಬಗ್ಗೆ ಪರಿಶೀಲಿಸಿ ಕ್ರಮ ವಹಿಸಲಾಗುವುದು. |
| ಈ. | ಗೃಹ ಬಳಕೆ ಮತ್ತು ಗೃಹೇತರ ಬಳಕೆಗಾಗಿ ಸರಬರಾಜು ಮಾಡಲಾದ ನೀರಿಗೆ ವಿಧಿಸಲಾದ ತೆರಿಗೆ ಅಥವಾ ಶುಲ್ಕದಿಂದ ವಸೂಲಿಸಬೇಕಾದ ಬಾಕಿ ಮೊತ್ತ ಹಾಗೂ ದಂಡದ ಮೊತ್ತದ ಪ್ರಮಾಣ ಎಷ್ಟು: (ವಿವರ ನೀಡುವುದು). | ಮಂಡ್ಯ ನಗರದ ನೀರು ಸರಬರಾಜು ಬಳಕೆದಾರರಿಂದ ವಸೂಲಾಗಬೇಕಾಗಿರುವ ಒಟ್ಟು ಬಾಕಿ ಮೊತ್ತ ರೂ.4458.52 ಲಕ್ಷಗಳು. ಇದರಲ್ಲಿ ಬಡ್ಡಿ ಮೊತ್ತ ರೂ.1691.72 ಲಕ್ಷಗಳಾಗಿರುತ್ತದೆ. |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಉ. | ಬಾಕಿ ಇರುವ ಮೊತ್ತವನ್ನು ವಸೂಲಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? ವಿವರ ನೀಡುವುದು. | ಬಾಕಿಯಿರುವ ಮೊತ್ತವನ್ನು ವಸೂಲಿ ಮಾಡಲು ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ.<br>• ನಗರದ ವಿವಿಧ ಬಡಾವಣೆಗಳಲ್ಲಿ ಮನೆಮನೆಗಳಿಗೆ ತೆರಳಿ ಸ್ಥಳದಲ್ಲಿ ತೆರಿಗೆ ವಸೂಲಾತಿ ಮಾಡುವ ಸಲುವಾಗಿ 14 ತೆರಿಗೆ ವಸೂಲಾತಿಗಾರರನ್ನು ನೇಮಿಸಲಾಗಿರುತ್ತದೆ.<br>• ನಗರದ ವಿವಿಧ ಭಾಗಗಳಲ್ಲಿ 04 ನೀರಿನ ತೆರಿಗೆ ಪಾವತಿ ಕೇಂದ್ರಗಳನ್ನು ತೆರೆಯಲಾಗಿರುತ್ತದೆ.<br>• ಬಾಕಿ ಉಳಿಸಿಕೊಂಡಿರುವ ಗ್ರಾಹಕರ ಮನೆಗಳಿಗೆ ನೋಟೀಸ್ ನೀಡಿ ಕಂದಾಯ ಪಾವತಿ ಮಾಡದಿರುವ ಸಂಪರ್ಕಗಳನ್ನು ಕಡಿತಗೊಳಿಸಲಾಗುವುದೆಂದು ತಿಳಿಸಿ ಬಾಕಿ ವಸೂಲಾತಿ ಮಾಡಲು ಕ್ರಮವಹಿಸಲಾಗಿರುತ್ತದೆ. |

ನಅಇ 115 ಯುಎಂಎಸ್ 2023

15/12/2023

(ಸುರೇಶ್ ಬಿ.ಎಸ್)
ನಗರಾಭಿವೃದ್ಧಿ ಮತ್ತು ನಗರ
ಯೋಜನೆ ಸಚಿವರು